## ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಾಗರ

**ಅಪರಾಧ ಮೊಕದ್ದಮೆ ಸಂಖ್ಯೆಃ 1606-2026**

**ಪಿರ್ಯಾದುದಾರರುಃ-** ಆನಂದಪುರ ಪೊಲೀಸ್

ವಿರುದ್ಧ

**ಆರೋಪಿತರುಃ-**

ಎ 1) ಚಂದ್ರ ಬಿನ್ ಅಣ್ಣಪ್ಪ
ವಯಸ್ಸು ಸುಮಾರು 44 ವರ್ಷ,
ವಾಸಃ ಸಿದ್ದೇಶ್ವರ ಕಾಲೋನಿ,
ಆನಂದಪುರ ಗ್ರಾಮ, ಸಾಗರ ತಾಲ್ಲೂಕು,
ಶಿವಮೊಗ್ಗ.

## ಆಪಾದನೆ

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರಾದ ಶ್ರೀ ರಾಘವೇಂದ್ರ ಶೆಟ್ಟಿಗಾರ್ ಬಿ.ಎಂ., ಎಲ್.ಎಲ್.ಎಮ್., ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ಆಪಾದನೆ ಹೊರಿಸುತ್ತೇನೆಃ

ದಿನಾಂಕಃ 25-05-2026 ರಂದು ಸಂಜೆ 6.45 ಗಂಟೆ ಸಮಯದಲ್ಲಿ, ಸಾಗರ ತಾಲ್ಲೂಕು, ಆನಂದಪುರ ಗ್ರಾಮದ ರೈಲ್ವೆ ಸ್ಟೇಷನ್ ಹತ್ತಿರ, ಸಾರ್ವಜನಿದಿಕ ಸ್ಥಳದಲ್ಲಿ ಆರೋಪಿಯಾದ ನೀವು ಸಾರ್ವಜನಿಕರಿಗೆ ಇದು ಓ.ಸಿ ಮಟ್ಕಾ ಜೂಜಾಟ, ನೀವು 1/- ರೂ ಕಟ್ಟಿ ಗೆದ್ದರೆ ನಿಮಗೆ 80/- ರೂ ಕೊಡುತ್ತೇನೆಂದು ಕರೆಯುತ್ತಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸಿ, ಚೀಟಿಯಲ್ಲಿ ಓ.ಸಿ ನಂಬರ್ ಬರೆದುಕೊಂಡು ಅವರಿಗೂ ಸಹ ಚೀಟಿ ಬರೆದು ಕೊಡುತ್ತಿದ್ದು, ಸರ್ಕಾರದ ಯಾವುದೇ ಪರವಾನಿಗೆ ಇಲ್ಲದೇ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಓಸಿ ಮಟ್ಕಾ ಜೂಜಾಟ ನಡೆಸುತ್ತಿದ್ದಾಗ, ಚಾಸಾ-01, 2 ಮತ್ತು 3 ರವರು, ಚಾಸಾ-04 ಮತ್ತು ಚಾಸಾ-05 ರವರೊಂದಿಗೆ ದಾಳಿ ಮಾಡಿ ಪರಿಶೀಲಿಸಿದಾಗ, ನೀವು ಓಸಿ ಮಟ್ಕಾ ಜೂಜಾಟಕ್ಕೆ ಬಳಸಿದ 750/- ರೂ ನಗದು ಹಣದ, ಒಂದು ಓಸಿ ಚೀಟಿ, ಒಂದು ಬಾಲ್ ಪೆನ್ ಅಮಾನತ್ತು ಪಡಿಸಿಕೂಂಡಿದ್ದು, ಆ ಮೂಲಕ ಕಲಂ 78(3) ಕೆ. ಪಿ. ಆಕ್ಟ್ ಅಡಿಯಲ್ಲಿ ನೀವು ಶಿಕ್ಷಾರ್ಹ ಅಪರಾದ ಮಾಡಿದ್ದೀರಿ.

**ಪ್ರಶ್ನೆ೦1 ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಅಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?**

**ಉತ್ತರಃ-**

**ಪ್ರಶ್ನೆ ೨೦ ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ಪ್ರತಿರಕ್ಷೆ ಇದೆಯಾ?**

**ಉತ್ತರಃ-**

**(ದಿಃ *09೦07೦2026* ರಂದು ಆರೋಪಿಯಿಂದ ಮೇಲ್ಕಂಡ ಅಪಾದನೆ ನೀಡಲ್ಪಟ್ಟಿರುತ್ತದೆ ಎಂದು ದೃಢೀಕರಿಸಿದೆ)೦**

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು
**ಮತ್ತು ಜೆಎಂಎಫ್‌ಸಿ೦ ಸಾಗರ೦**